## ಬಾಳಲ್ಲಿ ಬೆಳಕು ಮೂಡಿಸುವ ಅಪೇಕ್ಷೆ: ಸಿದ್ದರಾಮಯ್ಯ



ಆಧುನಿಕ ಜಗತ್ತಿನಲ್ಲಿ ಮಾನವನ ಅತಿ ಮುಖ್ಯ ಅಗತ್ಯಗಳಲ್ಲಿ ಆಮ್ಲಜನಕ, ಕುಡಿಯುವ ನೀರಿನ ನಂತರದ ಸ್ಥಾನ ವಿದ್ಯುತ್‌ಗೆ ಇದೆ. ವಿದ್ಯುತ್ ಬೇಡಿಕೆ ಮತ್ತು ಪೂರೈಕೆಯಲ್ಲಿ ಸಮತೋಲನ ಕಾಯ್ದುಕೊಳ್ಳುವುದು ಅತ್ಯವಶ್ಯ. ಸಂಗ್ರಹಿಸಿಟ್ಟುಕೊಳ್ಳಲಾಗದ ವಿದ್ಯುತ್ ಅನ್ನು ಉತ್ಪಾದಿಸಿದ ಮರುಕ್ಷಣದಲ್ಲೇ ಬಳಕೆ ಮಾಡಬೇಕಾಗಿದೆ. ಹೀಗಿದ್ದರೂ ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣಾ ಕ್ಷೇತ್ರಗಳಲ್ಲಿ ದಿಟ್ಟ ಹೆಜ್ಜೆ ಇಟ್ಟ ರಾಜ್ಯ ನಮ್ಮದು.

ಸಾಂಪ್ರದಾಯಿಕ, ಅಸಾಂಪ್ರದಾಯಿಕ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ದೀರ್ಘಾವಧಿ ಯೋಜನೆಗಳನ್ನು ಹಮ್ಮಿಕೊಂಡಿರುವ ಸರ್ಕಾರ, ರಾಜ್ಯ ಎದುರಿಸಲಿರುವ ವಿದ್ಯುತ್ ಕೊರತೆಯನ್ನು ನೀಗಿಸಲು ಸಜ್ಜಾಗಿದೆ.

ವಿದ್ಯುತ್ ಬಳಕೆಯ ಸಮರ್ಥ ನಿರ್ವಹಣೆ, ತಾಂತ್ರಿಕ ಮತ್ತು ವಾಣಿಜ್ಯ ನಷ್ಟ ತಗ್ಗಿಸುವತ್ತ ಗಮನ ಹರಿಸಿ 2020 ಹೊತ್ತಿಗೆ ಸರ್ವರಿಗೂ ನಿರಂತರ ವಿದ್ಯುತ್ ಪೂರೈಸುವುದು ನಮ್ಮ ಧ್ಯೇಯ.

ಯೋಜಿತ ಕಾರ್ಯಕ್ರಮಗಳು ಪೂರ್ಣಗೊಂಡರೆ ಇಂಧನ ಇಲಾಖೆ ಸಮರ್ಥವಾಗಿ ಮುನ್ನಡೆದು, ರಾಜ್ಯದ ಜನರ ಬಾಳಲ್ಲಿ ಬೆಳಕು ಮೂಡಿಸಲಿದೆ ಎಂಬ ವಿಶ್ವಾಸ ನನ್ನದು.

ಮೆಗಾವಾಟ್ ಗುರಿ ಇದ್ದು, 328 ಮೆಗಾವಾಟ್ ಪೂರೈಕೆಯಾಗುತ್ತಿತ್ತು. 2017ರ ಮಾರ್ಚ್‌ನಲ್ಲಿ 758 ಮೆಗಾವಾಟ್ ಗುರಿಗೆ ಬದಲಾಗಿ ಪೂರೈಕೆ ಸಾಮರ್ಥ್ಯ 1,930ಕ್ಕೆ ಹೆಚ್ಚಳವಾಯಿತು. 2013ರಲ್ಲಿ ಸಂಚಿತ ಸಾಮರ್ಥ್ಯ 4,065 ಮೆಗಾವಾಟ್ ಇದ್ದರೆ, ಈಗ ಅದು 7,221 ಮೆಗಾವಾಟ್‌ಗೆ ಏರಿಕೆಯಾಗಿದೆ. ಇದು ವಿದ್ಯುತ್ ಕ್ಷೇತ್ರದಲ್ಲಿ ಕ್ರಾಂತಿಕಾರಕ ಪರಿವರ್ತನೆ ತರಲು ಪ್ರಮುಖ ಕಾರಣ ಎಂಬುದು ಇಂಧನ ಇಲಾಖೆಯ ಅಭಿಪ್ರಾಯ.

ಕರ್ನಾಟಕ ವಿದ್ಯುತ್ ನಿಗಮ ದಕ್ಷ ಕಾರ್ಯಾಚರಣೆ ಹಾಗೂ ಉತ್ಪಾದನೆ ಸಾಮರ್ಥ್ಯದ ಹೆಚ್ಚಳಕ್ಕೆ ಆದ್ಯತೆ ನೀಡಿದ್ದರಿಂದಾಗಿ ಬೇರೆ ಬೇರೆ ಮೂಲಗಳಿಂದ ವಿದ್ಯುತ್ ಪೂರೈಕೆ ಪ್ರಮಾಣ ದುಪ್ಪಟ್ಟಾಯಿತು. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 700 ಮೆಗಾವಾಟ್ ಸಾಮರ್ಥ್ಯದ ಮೂರನೇ ಘಟಕಕ್ಕೆ ಚಾಲನೆ ನೀಡಲಾಗಿದೆ. ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ 1,600 ಮೆಗಾವಾಟ್ ವಾಣಿಜ್ಯಾರ್ಥ ಉತ್ಪಾದನೆ ಆರಂಭವಾಗಿದೆ.

ಮಳವಳ್ಳಿ ತಾಲ್ಲೂಕಿನ ಶಿಂಷಾಪುರದಲ್ಲಿ 10 ಮೆಗಾವಾಟ್ ಸಾಮರ್ಥ್ಯದ ಸೌರಶಕ್ತಿ ವಿದ್ಯುತ್ ಘಟಕ ಚಾಲನೆಯಾಗಿದೆ. ಆಂಧ್ರಪ್ರದೇಶ ಸರ್ಕಾರದ ಸಹಭಾಗಿತ್ವದಲ್ಲಿ ಅನುಷ್ಠಾನಗೊಂಡ ಜುರಾಲಾ ಜಲವಿದ್ಯುತ್ ಸ್ಥಾವರದಿಂದ 117 ಮೆಗಾವಾಟ್ ವಿದ್ಯುತ್ ಪೂರೈಕೆಯಾಗುತ್ತಿದೆ.

ಹೀಗೆ ಎಲ್ಲ ಮೂಲಗಳಿಂದ ವಿದ್ಯುತ್ ಹರಿದು ಬರುತ್ತಿದೆ. 2013ರಿಂದ ಈಚೆಗೆ ಕರ್ನಾಟಕ ವಿದ್ಯುತ್ ನಿಗಮ 1,642 ಮೆಗಾವಾಟ್, ಕೇಂದ್ರ ಘಟಕಗಳಿಂದ 1,102 ಮೆಗಾವಾಟ್ ಹಾಗೂ ನವೀಕೃತ ಇಂಧನ ಮೂಲದಿಂದ 4525 ಮೆಗಾವಾಟ್ ಸೇರಿ ಒಟ್ಟು, 7,268 ಮೆಗಾವಾಟ್ ವಿದ್ಯುತ್ ರಾಜ್ಯದ ಸಂಪರ್ಕ ಜಾಲಕ್ಕೆ ಹೆಚ್ಚುವರಿಯಾಗಿ ಸೇರ್ಪಡೆಯಾಗಿದೆ. ಇದಲ್ಲದೇ, ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆಯಲ್ಲಿ ಆಗಬಹುದಾದ ಅಡಚಣೆಯನ್ನು ಮುನ್ನಂದಾಜಿಸಿ, ವಿದ್ಯುತ್ ಖರೀದಿಗೆ ಒಪ್ಪಂದ ಮಾಡಿಕೊಂಡಿರುವುದ ರಿಂದಾಗಿ ಕತ್ತಲೆಯತ್ತ ಕರ್ನಾಟಕ ಎಂಬ ಕುಖ್ಯಾತಿಯಿಂದ ರಾಜ್ಯ ಬಚಾವಾಗಿದೆ. ಕರ್ನಾಟಕದ ಮಟ್ಟಿಗೆ ಇದೊಂದು ಐತಿಹಾಸಿಕ ದಾಖಲೆ ಯಾಗಿರುವುದಂತೂ ನಿಜ.

